**೪ [೧][ಬಿ](ii) ವಿಶ್ವವಿದ್ಯಾನಿಲಯದ ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರ ಮತ್ತು ಕರ್ತವ್ಯಗಳು:**

**ವಿಶ್ವವಿದ್ಯಾನಿಲಯದ ಅಧಿಕಾರಿಗಳು**

ಈ ಮುಂದಿನವರು ವಿಶ್ವವಿದ್ಯಾನಿಲಯದ ಅಧಿಕಾರಿಗಳಾಗಿರುತ್ತಾರೆ.

- ಕುಲಾಧಿಪತಿ
- ಸಹಕುಲಾಧಿಪತಿ
- ಕುಲಪತಿ
- ಕುಲಸಚಿವರು
- ಕುಲಸಚಿವರು, (ಮೌಲ್ಯಮಾಪನ)
- ಡೀನರುಗಳು
- ಗ್ರಂಥಪಾಲಕರು
- ಹಣಕಾಸು ಅಧಿಕಾರಿ
- ನಿರ್ದೇಶಕರು , ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ
- ನಿರ್ದೇಶಕರು , ವಿದ್ಯಾರ್ಥಿ ಕಲ್ಯಾಣ
- ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು;
- ನಿರ್ದೇಶಕರು, ಶಾರೀರಿಕ ಶಿಕ್ಷಣ
- ರಾಜ್ಯ ಸರ್ಕಾರದ ಶಿಫಾರಸಿನ ಮೇಲೆ ಕುಲಪತಿಯು ಕಾಲಕಾಲಕ್ಕೆ ಹೆಸರಿಸಬಹುದಾದ ವಿಶ್ವವಿದ್ಯಾನಿಲಯದ ಅಂಥ ಇತರ ಅಧಿಕಾರಿಗಳು.

**ಕುಲಾಧಿಪತಿ:-**

೧. ಕರ್ನಾಟಕ ರಾಜ್ಯಪಾಲರು ತಮ್ಮ ಪದದ ಕಾರಣದಿಂದಾಗಿ ವಿಶ್ವವಿದ್ಯಾನಿಲಯದ ಕುಲಾಧಿಪತಿಯಾಗಿರುತ್ತಾರೆ.
೨. ಅವರು ವಿಶ್ವವಿದ್ಯಾನಿಲಯದ ಮುಖ್ಯಸ್ಥರಾಗಿರುತ್ತಾರೆ ಮತ್ತು ಉಪಸ್ಥಿತರಿದ್ದಾಗ ವಿಶ್ವವಿದ್ಯಾನಿಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸುವರು.
೩. ಅವರು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ತಮಗೆ ಪ್ರದತ್ತವಾದ ಇತರ ಅಧಿಕಾರಗಳನ್ನು ಹೊಂದಿರುತ್ತಾರೆ.

**ಸಹಕುಲಾಧಿಪತಿ:-**

೧. ಕರ್ನಾಟಕದಲ್ಲಿ ಉನ್ನತ ಶಿಕ್ಷಣ ಅಥವಾ ವಿಶ್ವವಿದ್ಯಾನಿಲಯ ಶಿಕ್ಷಣದ ಪ್ರಭಾರ ಹೊಂದಿರುವ ಸಚಿವರು ಅವರ ಪದದ ಕಾರಣದಿಂದಾಗಿ ವಿಶ್ವವಿದ್ಯಾನಿಲಯದ ಸಹ ಕುಲಾಧಿಪತಿಯಾಗಿರುತ್ತಾರೆ.
೨. ಅವರು, ಕುಲಾಧಿಪತಿಯವರ ಗೈರುಹಾಜರಿಯಲ್ಲಿ ವಿಶ್ವವಿದ್ಯಾನಿಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸುತ್ತಾರೆ.

**ಕುಲಪತಿ:-**

- ಕುಲಪತಿಯು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರುತ್ತಾರೆ.

- ರಾಜ್ಯ ಸರ್ಕಾರವು, ಕುಲಾಧಿಪತಿಯಿಂದ, ರಾಜ್ಯ ಸರ್ಕಾರದಿಂದ, ವಿಶ್ವವಿದ್ಯಾನಿಲಯ ಅನುದಾನ ಆಯೋಗದಿಂದ ಮತ್ತು ಸಿಂಡಿಕೇಟನಿಂದ ನಾಮನಿರ್ದೇಶಿತರಾದ ಒಬ್ಬೊಬ್ಬ ವ್ಯಕ್ತಿಯಿಂದ ಕೂಡಿದ ನಾಲ್ಕು ಮಂದಿ ಸದಸ್ಯರನ್ನು ಒಳಗೊಂಡ ಒಂದು

ಶೋಧನಾ ಸಮಿತಿಯನ್ನು ರಚಿಸುತ್ತಾರೆ. ರಾಜ್ಯ ಸರ್ಕಾರವು ನಾಲ್ಕು ಸದಸ್ಯರ ಪೈಕಿ ಒಬ್ಬನನ್ನು ಸಮಿತಿಯ ಅಧ್ಯಕ್ಷನನ್ನಾಗಿ ನೇಮಕ ಮಾಡುತ್ತಾರೆ. ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗೆ ಕಡಿಮೆಯಲ್ಲದ ಅವರ ನಾಮನಿರ್ದೇಶಿತನು ಸಮಿತಿಯ ಸಂಚಾಲಕರಾಗಿರುತ್ತಾರೆ.

- ರಾಜ್ಯ ಸರ್ಕಾರದ, ವಿಶ್ವವಿದ್ಯಾನಿಲಯದ ಅಥವಾ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾದ ಯಾವುದೇ ಕಾಲೇಜಿನ ಅಥವಾ ಸಂಸ್ಥೆಯ ವ್ಯವಹಾರಗಳೊಂದಿಗೆ ಸಂಬಂಧವಿರುವ ಯಾವ ವ್ಯಕ್ತಿಯನ್ನೂ ಸಂಶೋಧನಾ ಸಮಿತಿಯ ಸದಸ್ಯನನ್ನಾಗಿ ನಾಮನಿರ್ದೇಶನ ಮಾಡುವದಿಲ್ಲ.

- ಶೋಧನ ಸಮಿತಿಯು, ಖ್ಯಾತ ಶಿಕ್ಷಣ ತಜ್ಞರಾದ ಮೂರು ವ್ಯಕ್ತಿಗಳ ಒಂದು ಪಟ್ಟಿಯನ್ನು ಆಕಾರಾದಿ ಕ್ರಮದಲ್ಲಿ ರಾಜ್ಯಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಆ ಪಟ್ಟಿಯನ್ನು ಕುಲಾಧಿಪತಿಯವರಿಗೆ ಕಳುಹಿಸುತ್ತಾರೆ, ಅವರು ಅರ್ಹತೆ, ಸಮದರ್ಶಿತ್ವ ಮತ್ತು ಸಾಮಾಜಿಕ ನ್ಯಾಯ ಇವುಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಜ್ಯ ಸರ್ಕಾರದ ಸಹಮತಿಯೊಡನೆ ಪಟ್ಟಿಯಿಂದ ಒಬ್ಬ ವ್ಯಕ್ತಿಯನ್ನು ಕುಲಪತಿಯಾಗಿ ನೇಮಕ ಮಾಡುತ್ತಾರೆ.

ಕುಲಾಧಿಪತಿಯವರ ಅವಶ್ಯವೆಂದು ಪರಗಣಿಸಿದರೆ ರಾಜ್ಯ ಸರ್ಕಾರದ ಸಹಮತಿಯೊಡನೆ ಎರಡನೆಯ ಪಟ್ಟಿಯನ್ನು ತರಿಸಿಕೊಳ್ಳುತ್ತದೆ. ಮತ್ತು ಶೋಧನಾ ಸಮಿತಿಯು ಎರಡನೆಯ ಪಟ್ಟಿಯನ್ನು ಸಲ್ಲಿಸುತ್ತದೆ ಹಾಗೂ ಅದು ಅಂತಿಮವಾಗಿರುತ್ತದೆ.

- ಯಾವೊಬ್ಬ ವ್ಯಕ್ತಿಯ ವಯಸ್ಸು ಅರವತ್ತೈದು ವರ್ಷವನ್ನು ಮೀರಿದ್ದರೆ, ಆತನನ್ನು ಕುಲಪತಿಯನ್ನಾಗಿ ನೇಮಕ ಮಾಡುವದಿಲ್ಲ ಅಥವಾ ಅವನು ಆ ಪದವನ್ನು ಧಾರಣ ಮಾಡುವಂತಿಲ್ಲ.
- ಕುಲಪತಿಯವರು, ಕುಲಾಧಿಪತಿಯವರ ಇಷ್ಟಪರ್ಯಂತ ಮತ್ತು (೫)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ನಾಲ್ಕು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡುವುದು. ಅವರು ಎರಡನೇ ಅವಧಿಗೆ ಪುನರ್ ನೇಮಕಕ್ಕೆ ಅರ್ಹರಾಗಿರುವುದಿಲ್ಲ.
- ಕುಲಪತಿಯನ್ನು, ಈ ಅಧಿನಿಯಮದ ಉಪಬಂಧಗಳನ್ನು ಉದ್ದೇಶಪೂರ್ವಕವಾಗಿ ಬಿಟ್ಟುಬಿಡುವ ಅಥವಾ ನೆರವೇರಿಸಲು ನಿರಾಕರಿಸುವ ಅಥವಾ ಅವನಲ್ಲಿ ನಿಹಿತವಾದ ಅಧಿಕಾರಗಳನ್ನು ದುರುಪಯೋಗ ಪಡಿಸಿಕೊಂಡ ಕಾರಣದ ಮೇಲೆ ಮತ್ತು ರಾಜ್ಯ ಸರ್ಕಾರವು. (೮)ನೇ ಉಪಪ್ರಕರಣದ ಮೇರೆಗೆ ಅದರಿಂದ ಆದೇಶಿಸಲಾದ ವಿಚಾರಣೆ ವರದಿಯನ್ನು ಪರಿಗಣಿಸಿದ ನಂತರ ಮತ್ತು ರಾಜ್ಯಸರ್ಕಾರವು ಸೂಚಿಸಿದ ಸಲಹೆ ಮೇಲೆ ಕುಲಾಧಿಪತಿಯು ಹೊರಡಿಸಿದ ಆದೇಶದ ಹೊರತು, ಪದದಿಂದ ತೆಗೆದು ಹಾಕುವದಿಲ್ಲ.
- ಈ ಪ್ರಕರಣದ ಮೇರೆಗೆ ಒಂದು ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ಆಗಿದ್ದ ವ್ಯಕ್ತಿಯನ್ನು ನೇಮಕ ಮಾಡುವರು. ವಿಚಾರಣಾ ಪ್ರಾಧಿಕಾರವು, ಕುಲಪತಿಯು ಮನವಿಯನ್ನು ಸಲ್ಲಿಸಲು ಅವಕಾಶ ನೀಡಿದ ನಂತರ ವಿಚಾರಣೆ ನಡೆಸುವದು ಮತ್ತು ವಿಧಿಸಬೇಕಾದ ಯಾವುದೇ ದಂಡನೆ ಇದ್ದರೆ, ಅದೂ ಒಳಗೊಂಡಂತೆ ಒಂದು ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸುತ್ತದೆ. ರಾಜ್ಯ ಸರ್ಕಾರವು, ವರದಿಯನ್ನು ಪರಶೀಲಿಸಿದ ನಂತರ, ಕುಲಾಧಿಪತಿಗೆ ಸಲಹೆ ನೀಡುತ್ತದೆ. ಕುಲಾಧಿಪತಿಯು ಸಾಧ್ಯವಾದಷ್ಟು ಮಟ್ಟಿಗೆ ಆರು ತಿಂಗಳೊಳಗಾಗಿ ಅಂಥ ಸಲಹೆಗೆ ಅನುಸಾರವಾಗಿ ಕ್ರಮ ಕೈಗೊಳ್ಳಾಗುವುದು

- ಕುಲಪತಿಯ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಕುಲಾಧಿಪತಿಯು ನಿರ್ಧರಿಸಬಹುದಾದಂತೆ ಇರುತ್ತವೆ. ಮತ್ತು ಅವುಗಳನ್ನು ಅವನು ಕುಲಪತಿಯಾಗಿ ನೇಮಕವಾದ ತರುವಾಯ ಅವನಿಗೆ ಅನಾನುಕೂಲವಾಗುವಂತೆ ವ್ಯತ್ಯಸ್ಥಗೊಳಿಸಲಾಗದು. ಕುಲಪತಿಯಾಗಿ ತನ್ನ ಅಧಿಕವಾರಾವಧಿಯಲ್ಲಿ ವಯೋನಿವೃತ್ತಿಯ ಮೇಲೆ ನಿವೃತ್ತನಾಗುವ ಕುಲಪತಿಯ ಸಂದರ್ಭದಲ್ಲಿ ಈಗಾಗಲೇ ನಿರ್ಧರಿಸಲಾದ ಅವನ ಸೇವಾ ಷರತ್ತುಗಳು ಮುಂದುವರಿಯುತ್ತವೆ. ಅವರ ಎಲ್ಲ ನಿವೃತ್ತಿ ಸೌಲಭ್ಯಗಳನ್ನು ತಡೆಹಿಡಿಯಲಾಗುತ್ತದೆ. ಅವುಗಳನ್ನು ಅವನು ಕುಲಪತಿಯಾಗಿ ಪದವನ್ನು ತ್ಯಜಿಸಿದ ನಂತರ ಬಿಡುಗಡೆ ಮಾಡಲಾಗುತ್ತದೆ.

- ನಿವೃತ್ತಿಹೊಂದಿದ ಬಬ್ಬ ವ್ಯಕ್ತಿಯು ಕುಲಪತಿಯಾಗಿ ನೇಮಕಗೊಂಡರೆ, ನೇಮಕಗೊಂಡ ಮೇಲೆ ಉಪಲಬ್ಧಿಗಳು ಸೇರಿದಂತೆ ಸೇವಾ ನಿಬಂಧನೆ ಮತ್ತು ಷರತ್ತುಗಳನ್ನು ಕುಲಾಧಿಪತಿಯು ನಿರ್ಣಯಿಸುತ್ತಾರೆ. ಅವನು ಪಡೆಯುವ ನಿವೃತ್ತಿ ವೇತನದ ಮೊತ್ತವನ್ನು ಮತ್ತು ಭತ್ಯಗಳನ್ನು ಉಪಲಬ್ದಿಗಳಿಂದ ಕಳೆಯಲಾಗುತ್ತದೆ.

- ರಾಜ್ಯದಲ್ಲಿ ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವ ಒಬ್ಬ ಪ್ರಾಧ್ಯಾಪಕನು ಕುಲಪತಿಯಾಗಿ ನೇಮಕಗೊಂಡರೆ, ಅವನು ಕುಲಪತಿಯಾಗಿರುವ ಅಧಿಕಾರಾವಧಿಯಲ್ಲಿ ಪ್ರಾಧ್ಯಾಪಕನಾಗಿ ಅವನ ಸೇವಾ ನಿಭಂದನೆ ಮತ್ತು ಷರತ್ತುಗಳನ್ನು ಅವನಿಗೆ ಅನಾನುಕೂಲವಾಗುವಂತೆ ಪರಷ್ಕರಿಸುವದಿಲ್ಲ ಮತ್ತು ಅವನು ತನ್ನ ಹುದ್ದೆಯ ಧಾರಣಾಧಿಕಾರವನ್ನು ಉಳಿಸಿಕೊಳ್ಳುತ್ತಾನೆ.

**ಕುಲಪತಿಯ ಅಧಿಕಾರಗಳು:-**

- ಕುಲಪತಿಯು ವಿಶ್ವವಿದ್ಯಾನಿಲಯದ ಪ್ರಧಾನ ಕಾರ್ಯನಿರ್ವಾಹಕ ಮತ್ತು ವಿದ್ಯಾವಿಷಯಕ ಅಧಿಕಾರಿಯಾಗಿದ್ದು ವಿಶ್ವವಿದ್ಯಾನಿಲಯದ ವ್ಯವಹಾರಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಚಲಾಯಿಸುತ್ತಾನೆ. ಅವನು ವಿಶ್ವವಿದ್ಯಾನಿಲಯದಲ್ಲಿ ಶಿಸ್ತುಪಾಲನೆಗೆ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಚಲಾಯಿಸುತ್ತಾನೆ.

- ಅವನು ವಿದ್ಯಾವಿಷಯಕ ಪರಿಷತ್ತು. ಸಿಂಡಿಕೇಟ್ ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಅಧ್ಯಕ್ಷತೆಯನ್ನು ವಹಿಸುತ್ತಾನೆ. ಅವರು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅಥವಾ ನಿಕಾಯಗಳ ಸಭೆಗಳ ಅಧ್ಯಕ್ಷತೆಯನ್ನು ವಹಿಸುತ್ತಾನೆ. ಮತ್ತು ಅವನು ಮತ ಚಲಾಯಿಸಲು ಹಕ್ಕುಳ್ಳವರಾಗಿರುತ್ತಾರೆ.

- ಅವನು ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಎಲ್ಲಾ ಉಪಬಂಧಗಳ ಪಾಲನೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಹೊಂದಿರುತ್ತಾರೆ.

- ಅವನು ತಾನಾಗಿಯೇ ಆಗಲಿ ಅಥವಾ ತನ್ನಿಂದ ಲಿಖಿತದಲ್ಲಿ ಅಧಿಕೃತನಾದ ವಿಶ್ವವಿದ್ಯಾನಿಲಯದ ಯಾವೊಬ್ಬ ಅಧಿಕಾರಿಯ ಮೂಲಕವೇ ಆಗಲಿ, ವಿದ್ಯಾವಿಷಯಕ ಪರಿಷತ್ತು ಸಿಂಡಿಕೇಟ್ ಮತ್ತು ಹಣಕಾಸು ಸಮಿತಿಯ ಸಭೆಗಳನ್ನು ಕರೆಯುತ್ತಾನೆ. ಮತ್ತು ಈ ಪ್ರಾಧಿಕಾರದ ತೀರ್ಮಾನಗಳನ್ನು ಜಾರಿಗೆ ತರಲು ಮತ್ತು ಕಾರ್ಯಗತಗೊಳಿಸಲು ಅವಶ್ಯವಾಗಬಹುದಾದಂಥ ಎಲ್ಲ ಕಾರ್ಯಗಳನ್ನು ನೆರವೇರಿಸತಕ್ಕದ್ದು.

- ಕುಲಪತಿಯು ತೆಗೆದುಕೊಂಡ ಅಗತ್ಯವೆಂದು ಅವನು ಅಭಿಪ್ರಾಯಪಡುವ ಯಾವುದೇ ತುರ್ತು ಸಂದರ್ಭದಲ್ಲಿ ಅವನು ಅವಶ್ಯವೆಂದು ಭಾವಿಸುವಂಥ ಕ್ರಮವನ್ನು ತೆಗೆದುಕೊಳ್ಳುತ್ತಾನೆ ಮತ್ತು ಆ ತರುವಾಯ ಅತಿ ಶೀಘ್ರ ಸಮಯದಲ್ಲಿ ಸಾಮಾನ್ಯವಾಗಿ ವ್ಯವಹರಿಸುತ್ತಿದ್ದಂಥ ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ವರದಿ ಮಾಡುತ್ತಾನೆ.

- ಕುಲಪತಿಯು ತೆಗೆದುಕೊಂಡ ಕ್ರಮವನ್ನು ಸಂಬಂಧಪಟ್ಟ ಪ್ರಾಧಿಕಾರ ಅಥವಾ ನಿಕಾಯವು ಅನುಮೋದಿಸದಿದ್ದರೆ, ಅವರು ಆ ವಿಷಯವನ್ನು ಕುಲಾಧಿಪತಿಗೆ ಒಪ್ಪಿಸಬಹುದು, ಆ ಬಗ್ಗೆ ಅವರ ತೀರ್ಮಾನವೇ ಅಂತಿಮವಾಗಿರುತ್ತದೆ.

- ಈ ಉಪಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ವಿಶ್ವವಿದ್ಯಾನಿಲಯದ ನೌಕರರ ವೇತನ ಶ್ರೇಣಿಯನ್ನು ಪರಿಷ್ಕರಿಸಲು ಅಥವಾ ಕಾಲೇಜಿಗೆ ಅಥವಾ ಶಿಕ್ಷಣ ವ್ಯಾಸಂಗ ಕ್ರಮಕ್ಕೆ ಸಂಯೋಜನೆ ಮಂಜೂರು ಮಾಡಲು ಚಲಾಯಿಸುವದಿಲ್ಲ. ಮತ್ತು ಈ ಉಪ ಪ್ರಕರಣದ ಮೇರೆಗೆ ಅಧಿಕಾರಗಳನ್ನು ಚಲಾಯಿಸಿ ಪರಿನಿಯಮಗಳು ಅಥವಾ ವಿನಿಯಮಗಳನ್ನು ಆರ್ಡಿನೆನ್ಸ್‌ಗಳನ್ನು ರಚಿಸಿದ್ದರೆ, ಅವುಗಳನ್ನು ಈ ಅಧಿನಿಯಮದ ಅನುಸಾರ ಕುಲಾಧಿಪತಿಗೆ ಸಲ್ಲಿಸುತ್ತಾರೆ.

- ಕುಲಪತಿಯು ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸುತ್ತಾನೆ.

**ಕುಲಸಚಿವರು:**

- ಕುಲಸಚಿವರು, ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು, ಸೂಪರ ಟೈಮ ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಖಿಲ ಭಾರತ ಸೇವೆಗೆ ಸೇರಿದ ಒಬ್ಬ ಅಧಿಕಾರಿಯನ್ನು, ರಾಜ್ಯ ಸರ್ಕಾರವು ನೇಮಕ ಮಾಡುವದು.

- ಕುಲಸಚಿವರು, ವಿದ್ಯಾವಿಷಯಕ ಪರಿಷತ್ತಿನ ಮತ್ತು ಸಿಂಡಿಕೇಟಿನ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯು ಮತ್ತು ಹಣಕಾಸು ಸಮಿತಿಯ ಸದಸ್ಯನು ಆಗಿರುತ್ತಾನೆ;
    ೧. ವಿಶ್ವವಿದ್ಯಾನಿಲಯದ ದಾಖಲೆಗಳ, ಸಾಮಾನ್ಯ ಮೊಹರಿನ ಮತ್ತು ಕುಲಪತಿ ಅಥವಾ ಸಿಂಡಿಕೇಟ್ ಅವನ ವಶಕ್ಕೆ ಒಪ್ಪಿಸುವಂಥ ಇತರ ಸ್ವತ್ತಿನ ಅಭಿರಕ್ಷಕನಾಗಿರುತ್ತಾನೆ;

೨. ಸಿಂಡಿಕೇಟಿನ, ವಿದ್ಯಾವಿಷಯಕ ಪರಿಷತ್ತಿನ ಅಥವಾ ವ್ಯಾಸಂಗ ವಿಭಾಗಗಳ, ಅಧ್ಯಯನ ಮಂಡಳಿಯ ಮತ್ತು ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಸಭೆಗಳನ್ನು ಕರೆಯುವ ನೋಟಿಸುಗಳನ್ನು ಹೊರಡಿಸುವುದು ಮತ್ತು ಅಂಥ ಎಲ್ಲ ಸಭೆಗಳ ನಡವಳಿಗಳನ್ನು ಇಡುವುದು;

೩. ಅವನು ಸದಸ್ಯ ಕಾರ್ಯದರ್ಶಿಯಾಗಿರುವ ಪ್ರಾಧಿಕಾರಗಳ ಅಧಿಕೃತ ಪತ್ರವ್ಯವಹಾರವನ್ನು ನಡೆಸುವುದು;

೪. ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಸಭೆಗಳ ಕಾರ್ಯ ಸೂಚಿಯ ಪ್ರತಿಗಳನ್ನು ಅವುಗಳನ್ನು ಹೊರಡಿಸಿದ ಕೂಡಲೇ ಮತ್ತು ಸಭೆಗಳನ್ನು ನಡೆಸಿ ಒಂದು ತಿಂಗಳೊಳಗಾಗಿ ಅವುಗಳ ನಡವಳಿಗಳನ್ನು ಕುಲಾಧಿಪತಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಒದಗಿಸುವುದು .

**ಕುಲಸಚಿವರ ಕರ್ತವ್ಯವಾಗಿದೆ.**

- ಕುಲಸಚಿವರು ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ಮಿನಿಯಮಗಳು ನಿಮಯಿಸಬಹುದಾದಂಥ ಮತ್ತು ಕುಲಪತಿಯು ಕಾಲಕಾಲಕ್ಕೆ ಹಂಚಿಕೆ ಮಾಡಬಹುದಾದ ಅಧಿಕಾರಗಳನ್ನು ಚಲಾಯಿಸುತ್ತಾನೆ ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸುತ್ತಾರೆ.
- ಕುಲಸಚಿವರಿಗೆ ಒಬ್ಬ ಅಥವಾ ಅದಕ್ಕೂ ಹೆಚ್ಚಿನ ಉಪ ಕುಲಸಚಿವರು ಮತ್ತು ಸಹಾಯಕ ಕುಲಸಚಿವರು ನೆರವು ನೀಡುತ್ತಾರೆ.

**ಕುಲಸಚಿವರು (ಮೌಲ್ಯಮಾಪನ):**

- ಕುಲಸಚಿವರು (ಮೌಲ್ಯಮಾಪನ) ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು. ಸಮೂಹ – ಎ ಹಿರಿಯ ಶ್ರೇಣಿಯ ದರ್ಜೆಗೆ ಕಡಿಮೆಯಲ್ಲದ ಕರ್ನಾಟಕ ಆಡಳಿತ ಸೇವೆಗೆ ಸೇರಿದ ಒಬ್ಬ ಅಧಿಕಾರಿಯನ್ನು ಅಥವಾ ಯಾವುದೇ ವಿಶ್ವವಿದ್ಯಾನಿಲಯದ ವ್ಯಾಸಂಗ ವಿಭಾಗದ ಒಬ್ಬ ಹಿರಿಯ ಸದಸ್ಯನನ್ನು ರಾಜ್ಯಸರ್ಕಾರವು ವಿಶ್ವವಿದ್ಯಾನಿಲಯದ ಕುಲಸಚಿವರು (ಮೌಲ್ಯಮಾಪನ) ಆಗಿ ನೇಮಕ ಮಾಡುತ್ತಾರೆ. ಪರಂತು, ಅಂಥ ವ್ಯಕ್ತಿಯು ಲಭ್ಯವಿರದಿದ್ದಲ್ಲಿ, ಕುಲಪತಿಯವರು ಶಿಫಾರಸುಮಾಡಿದ ಮೂವರಿಗಿಂತ ಕಡಿಮೆಯಾಗಿರದ ವ್ಯಕ್ತಿಗಳ ಪಟ್ಟಿಯಿಂದ, ಸಿಂಡಿಕೇಟಿನ ಅನುಮೊದನೆಯೊಡನೆ, ಕುಲಪತಿಯವರು ಕುಲಸಚಿವರನ್ನು (ಮೌಲ್ಯಮಾಪನ) ನೇಮಕ ಮಾಡುತ್ತಾರೆ. ಪರಿನಿಯಮಗಳ ಮೂಲಕ ನಿಯಮಿಸಲಾದ ಅವಧಿಯೊಳಗೆ, ಸಿಂಡೆಕೇಟು ಪಟ್ಟಿಯಲ್ಲಿರುವ ಯಾವೊಬ್ಬ ವ್ಯಕ್ತಿಯನ್ನು ಅನುಮೋದಿಸದಿದ್ದರೆ, ಕುಲಾಧಿಪತಿಯವರು, ಕುಲಪತಿಯವರೊಡನೆ ಸಮಾಲೋಚಿಸಿ, ಅವರ ಪೈಕಿ ಕುಲಸಚಿವರು (ಮೌಲ್ಯಮಾಪನ)ನಾಗಲು ತಾನು ಸೂಕ್ತವೆಂದು ಭಾವಿಸುವಂಥ ಇತರ ವ್ಯಕ್ತಿಯನ್ನು ನೇಮಕ ಮಾಡಬಹುದು. ಹಾಗೆ ನೇಮಕಗೊಂಡ ಕುಲಸಚಿವರ (ಮೌಲ್ಯಮಾಪನ) ಇವರ ಸೇವಾ ನಿಬಂಧನೆಗಳು ಮತ್ತು ಪರತ್ತುಗಳು ಮತ್ತು ಉಪಲಬ್ಧಿಗಳು ಕುಲಾಧಿಪತಿಯವರು ನಿರ್ಧರಿಸಬಹುದಾದಂಥವುಗಳಾಗಿರುತ್ತದೆ.

- ಕುಲಸಚಿವರು (ಮೌಲ್ಯಮಾಪನ) ಸಿಂಡಿಕೇಟ್. ವಿದ್ಯಾವಿಷಯಕ ಪರಿಷತ್ತು, ಹಣಕಾಸು ಸಮಿತಿ ಮತ್ತು ಎಲ್ಲ ವ್ಯಾಸಂಗ ವಿಭಾಗಗಳ ಸದಸ್ಯನಾಗಿರುತ್ತಾನೆ.

- ಕುಲಸಚಿವರು (ಮೌಲ್ಯಮಾಪನ) ಪರೀಕ್ಷೆಗಳನ್ನು ನಡೆಸುವ ಮತ್ತು ಅದಕ್ಕೆ ಪ್ರಾಸಂಗಿಕವಾದ ಮತ್ತು ಅದಕ್ಕೆ ಸಹಾಯಕವಾದ ಎಲ್ಲ ಇತರ ವಿಷಯಗಳ ಪ್ರಭಾರದಲ್ಲಿದ್ದು ಮತ್ತು ಪರಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಮೂಲಕ ನಿಯಮಿಸಬಹುದಾದಂಥ ಅಥವಾ ಕುಲಪತಿಯಿಂದ ಹಂಚಿಕೆಯಾಗಬಹುದಾದಂಥ ಇತರ ಕರ್ತವ್ಯಗಳನ್ನು ನಿರ್ವಹಿಸುತ್ತಾನೆ.

- ಕುಲಸಚಿವರಿಗೆ (ಮೌಲ್ಯಮಾಪನ) ಒಬ್ಬ ಅಥವಾ ಹೆಚ್ಚು ಉಪ ಕುಲಸಚಿವರು (ಮೌಲ್ಯಮಾಪನ) ಮತ್ತು ಸಹಾಯಕ ಕುಲಸಚಿವರು (ಮೌಲ್ಯಮಾಪನ) ನೆರವು ನೀಡುತ್ತಾರೆ.

**ಹಣಕಾಸು ಅಧಿಕಾರಿ:-**

೧) ಹಣಕಾಸು ಅಧಿಕಾರಿಯು, ಕುಲಪತಿಯು ಸಿಂಡಿಕೇಟಿಗೆ ಶಿಫಾರಸ್ಸು ಮಾಡಿದ, ಲೆಕ್ಕಪರಿಶೋಧನೆ, ಲೆಕ್ಕಪತ್ರ ಮತ್ತು ಹಣಕಾಸು ಆಡಳಿತದಲ್ಲಿ ಅನುಭವವಿರುವ ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಜಂಟಿ ನಿಯಂತ್ರಕ ಕೇಡರನಲ್ಲಿನ ಅಧಿಕಾರಿಗಳು ಅಥವಾ ಉಪಮಹಾಲೇಖಾಪಾಲ ದರ್ಜೆಯ ಒಬ್ಬ ಅಧಿಕಾರಿಯು ಇರುವ ಮೂರು ವ್ಯಕ್ತಿಗಳಿಗಿಂತ ಕಡಿಮೆಯಾಗಿರದ ಹೆಸರುಗಳ ಪಟ್ಟಿಯಿಂದ ಸಿಂಡಿಕೇಟಿನ ಅನುಮೋದನೆಯೊಂದಿಗೆ ಕುಲಪತಿಯಿಂದ ನೇಮಕ ಮಾಡಲಾಗುವ ವಿಶ್ವವಿದ್ಯಾನಿಲಯದ ಒಬ್ಬ ಪೂರ್ಣಕಾಲಿಕ ಅಧಿಕಾರಿಯಾಗಿರುತ್ತಾನೆ. ಪರಿನಿಯಮಗಳ ಮೂಲಕ ನಿಯಮಿಸಲಾದ ಸಮಯದೊಳಗೆ ಪಟ್ಟಿಯಲ್ಲಿನ ಯಾರ ಹೆಸರೂ ಸಿಂಡಿಕೇಟಿನಿಂದ ಅನುಮೋದಿತವಾಗಿರದಿದ್ದರೆ, ಕುಲಾಧಿಪತಿಯು, ಕುಲಪತಿಯೊಂದಿಗೆ ಸಮಾಲೋಚಿಸಿ, ಹಣಕಾಸು ಅಧಿಕಾರಿ ಆಗಿರಲು ಸೂಕ್ತವೆಂದು ಅವನು ಭಾವಿಸುವಂಥ ಇತರ ವ್ಯಕ್ತಿಯನ್ನು ನೇಮಕ ಮಾಡಲಾಗುವದು.

೨) ಹಣಕಾಸು ಅಧಿಕಾರಿಯ ನೇಮಕದ ಅವಧಿ ಮತ್ತು ಅವನ ಉಪಲಬ್ದಿಗಳು ಮತ್ತು ಇತರ ನಿಬಂಧನೆಗಳು ಮತ್ತು ಷರತ್ತುಗಳು ಕುಲಾಧಿಪತಿಯು ನಿರ್ಧರಿಸುವಂಥವುಗಳಾಗಿರುತ್ತವೆ.

೩) ಹಣಕಾಸು ಅಧಿಕಾರಿಯು, ಹಣಕಾಸು ಸಮಿತಿಯ ನಿಯಂತ್ರಣಕ್ಕೊಳಪಟ್ಟು, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಥವಾ ಕುಲಪತಿ ಅಥವಾ ಕುಲಸಚಿವರನ್ನು ಕಾಲ ಕಾಲಕ್ಕೆ ಅಗತ್ಯಪಡಿಸಬಹುದಾದಂತೆ ಅಂಥ ಅಧಿಕಾರಗಳನ್ನು ಚಲಾಯಿಸುತ್ತಾರೆ ಮತ್ತು ಅಂತಹ ಪ್ರಕಾರ್ಯಗಳನ್ನು ನಿರ್ವಹಿಸುತ್ತಾರೆ. ಅವನು ವಿದ್ಯಾವಿಷಯಕ ಪರಿಷತ್ತಿನ ಪದನಿಮಿತ್ತ ಸದಸ್ಯನಾಗಿರುತ್ತಾನೆ ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿರುತ್ತಾನೆ.

**ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ಹಣಕಾಸು ಅಧಿಕಾರಿಯ ಹುದ್ದೆಯು ತಾತ್ಕಾಲಿಕವಾಗಿ ಖಾಲಿ ಇರುವುದು:-**

(೧) ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ಅಥವಾ ಹಣಕಾಸು ಅಧಿಕಾರಿಯ ಮರಣ, ಅಮಾನತ್ತು ಅಥವಾ ತಾತ್ಕಾಲಿಕ ಗೈರು ಹಾಜರಿಯ ಸಂದರ್ಭದಲ್ಲಿ, ಕುಲಾಧಿಪತಿಯು, ಸಂದರ್ಭಾನುಸಾರ ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ಅಥವಾ ಹಣಕಾಸು ಅಧಿಕಾರಿಯ ಕರ್ತವ್ಯಗಳನ್ನು ನಿರ್ವಹಿಸಲು ವಿಶ್ವವಿದ್ಯಾನಿಲಯದ ಯಾವೊಬ್ಬ ಇತರ ಸೂಕ್ತ ಅಧಿಕಾರಿಗೆ ಪ್ರಾಧಿಕಾರ ನೀಡುವರು.

(೨) ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ),ಅಥವಾ ಹಣಕಾಸು ಅಧಿಕಾರಿಯ ಪದದಲ್ಲಿ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಸೂಕ್ತ ಅಧಿಕಾರಿಯನ್ನು ನೇಮಕಾತಿ ಮಾಡುವವರೆಗೆ ಕುಲಪತಿಯು ತನ್ನ ವಿವೇಚನಾನುಸಾರ, ಅಂತಹ ಖಾಲಿ ಹುದ್ದೆಗಳ ಕರ್ತವ್ಯವನ್ನು ನಿರ್ವಹಿಸಲು ಯಾವೊಬ್ಬ ಅಧಿಕಾರಿಯನ್ನು ಪ್ರಾಧಿಕಾರಿಸುವರು. ಕುಲಪತಿಯು, ಈ ಉಪಪ್ರಕರಣದ ಅಡಿಯಲ್ಲಿ ತಾನು ಕೈಗೊಂಡ ಕ್ರಮದ ಬಗ್ಗೆ ಕೂಡಲೇ ಕುಲಾಧಿಪತಿಗೆ ವರದಿಮಾಡುವರು.

**ಡೀನ್**

(೧) ಜ್ಯೇಷ್ಠತೆಯ ಅನುಸಾರ ಪ್ರತಿಯೊಂದು ವ್ಯಾಸಂಗ ವಿಭಾಗದಲ್ಲಿ ಒಬ್ಬ ಪ್ರಾಧ್ಯಾಪಕನು ಸರದಿಯ ಪ್ರಕಾರ ಎರಡು ವರ್ಷಗಳ ಅವಧಿಗೆ ವ್ಯಾಸಂಗ ವಿಭಾಗದ ಡೀನ್ ಆಗಿ ಕಾರ್ಯನಿರ್ವಹಿಸುವರು:

೧. ಪರಂತು, ಪ್ರಾಧ್ಯಾಪಕರಿಲ್ಲದಿದ್ದರೆ, ಜ್ಯೇಷ್ಠತಮ ರೀಡರನು, ಡೀನ್ ಆಗಿ ಕಾರ್ಯ ನಿರ್ವಹಿಸುವರು:

೨. ಮತ್ತು ಪರಂತು, ಯವುದೇ ವ್ಯಾಸಂಗ ವಿಭಾಗದಲ್ಲಿ ಯಾರೇ ಪ್ರಾಧ್ಯಾಪಕ ಅಥವಾ ರೀಡರ್ ಇಲ್ಲದಿದ್ದರೆ, ಆಗ ಕುಲಪತಿಯು, ತನ್ನ ವಿವೇಚನಾನುಸಾರ, ಡೀನ್ ಆಗಿ ಕಾರ್ಯ ನಿರ್ವಹಿಸಲು ಇತರ ಸೂಕ್ತ ಅಧ್ಯಾಪಕರನ್ನು ನಿಯೋಜಿಸುತ್ತಾರೆ.

೩. ಮತ್ತು ಪರಂತು, ವ್ಯಾಸಂಗ ವಿಭಾಗದಲ್ಲಿ ಡೀನ್ ಆಗಿ ಕಾರ್ಯ ನಿರ್ವಹಿಸಲು ವ್ಯಾಸಂಗ ವಿಭಾಗದಲ್ಲಿ ಯಾವ ವ್ಯಕ್ತಿಯೂ ದೊರೆಯದಿದ್ದಲ್ಲಿ ಅಥವಾ ವಿಶ್ವವಿದ್ಯಾನಿಲಯವು ಯಾವುದೇ ವ್ಯಾಸಂಗ ವಿಭಾಗಕ್ಕೆ ಅಧ್ಯಯನಗಳ ವಿಭಾಗವು ಹೊಂದಿಲ್ಲದಿದ್ದರೆ, ಆಗ, ಕುಲಪತಿಯು, ಜ್ಯೇಷ್ಠತೆಯ ಆಧಾರದ ಮೇಲೆ ವ್ಯಾಸಂಗ ವಿಭಾಗದ ಡೀನ್ ಆಗಿ ಕಾರ್ಯ ನಿರ್ವಹಿಸಲು ಯವುದೇ ಸಂಯೋಜಿತ ಕಾಲೇಜಿನ ಅಧ್ಯಯನಗಳ ವಿಭಾಗದಲ್ಲಿ ಅಂಥ ಅಧ್ಯಾಪಕನನ್ನು ನಾಮನಿರ್ದೇಶನ ಮಾಡುವರು.

(೨) ಪ್ರತಿಯೊಂದು ವ್ಯಾಸಂಗ ವಿಭಾಗದ ಡೀನರು ವ್ಯಾಸಂಗ ವಿಭಾಗದ ಕಾರ್ಯನಿರ್ವಹಣ ಅಧಿಕಾರಿಯಾಗಿರುತ್ತಾರೆ ಮತ್ತು ವ್ಯಾಸಂಗ ವಿಭಾಗದ ಸಭೆಗಳ ಅಧ್ಯಕ್ಷತೆ ವಹಿಸುತ್ತಾರೆ.

(೩) ಡೀನರು ಪರಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಮೂಲಕ ನಿಯಮಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸುವರು ಮತ್ತು ಅಂಥ ಇತರ ಅಧಿಕಾರಗಳನ್ನು ಚಲಾಯಿಸುವರು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುತ್ತಾರೆ.

**ನಿರ್ದೇಶಕರು , ವಿದ್ಯಾರ್ಥಿಗಳ ಕಲ್ಯಾಣ:**

ವಿದ್ಯಾರ್ಥಿಗಳ ಕಲ್ಯಾಣ ನಿರ್ದೇಶಕರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರುತ್ತಾರೆ ಮತ್ತು ಸಿಂಡಿಕೇಟಿನ ಶಿಫಾರಸಿನ ಮೇರೆಗೆ ಕುಲಾಧಿಪತಿಯಿಂದ ನೇಮಕಗೊಳ್ಳುತ್ತಾರೆ. ಆತನು ಕುಲಾಧಿಪತಿಯವರು ಪ್ರಧಾನ ಮಾಡಬಹುದಾದ ಅಥವಾ ವಿಧಿಸಬಹುದಾದ ಅಥವಾ ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸುವರು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸುವರು. ಆತನ ಪದಾವಧಿ. ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಪರಿನಿಯಮಗಳು ನಿಯಮಿಸಬಹುದು.

**ಗ್ರಂಥಪಾಲರು:**

ಗ್ರಂಥಪಾಲರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರುತ್ತಾರೆ ಮತ್ತು ಅಧಿನಿಯಮ ೫೩ನೇ ಪ್ರಕರಣದ (೧)ನೇ ಉಪಪ್ರಕರಣದಲ್ಲಿ ರಚಿತವಾದ ನೇಮಕಾತಿ ಮಂಡಲಿಯ ಶಿಫಾರಸಿನ ಮೇರೆಗೆ ಸಿಂಡಿಕೇಟಿನಿಂದ ನೇಮಕವಾಗುತ್ತಾರೆ. ಗ್ರಂಥಪಾಲರು ಪರಿನಿಯಮಗಳ ಮೂಲಕ ನಿಯಮಿಸಬಹುದಾದ ವಿದ್ಯಾರ್ಹತೆಗಳನ್ನು ಪಡೆದಿದ್ದು ಪರಿನಿಯಮಗಳಂತೆ ಅಧಿಕಾರಗಳನ್ನು ಚಲಾಯಿಸುವರು ಮತ್ತು ಕರ್ತವ್ಯಗಳನ್ನು ನಿರ್ವಹಿಸುವರು. ಅವನ ಉಪಲಬ್ಧಿಗಳು ಮತ್ತು ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು, ಪರಿನಿಯಮಗಳ ಮೂಲಕ ನಿಯಮಿಸಬಹುದು.

**ನಿರ್ದೇಶಕರು , ಯೋಜನೆ, ಮೇಲ್ವಿಚಾರಣೆ ಮ ತ್ತು ಮೌಲ್ಯಮಾಪನ ಮಂಡಲಿ :**

ಯೋಜನೆ, ಮೇಲ್ವಚಾರಣೆ ಮತ್ತು ಮೌಲ್ಯಮಾಪನ ಮಂಡಲಿಯ ನಿರ್ದೇಶಕರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರುತ್ತಾರೆ ಮತ್ತು ಸಿಂಡಿಕೇಟಿನಿಂದ ನೇಮಕಗೊಳ್ಳುತ್ತಾರೆ. ಪರಿನಿಯಮಗಳ ಮೂಲಕ ನಿಯಮಿಸಬಹುದಾದ ವಿದ್ಯಾರ್ಹತೆಗಳನ್ನು ಅವನು ಪಡೆದಿರುವವರು ಮತ್ತು ಪರಿನಿಯಮಗಳನ್ವಯ ಅಧಿಕಾರಗಳನ್ನು ಚಲಯಿಸುತ್ತಾರೆ ಮತ್ತು ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಅವನ ಉಪಲಬ್ಧಿಗಳು ಮತ್ತು ಸೇವಾ ನಿಬಂದನೆಗಳು ಹಾಗೂ ಷರತ್ತುಗಳು ಪರಿನಿಯಮಗಳ ಮೂಲಕ ನಿಯಮಿಸಬಹುದು.

**ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು:**

ನಿರ್ದೇಶಕ, ಕಾಲೇಜು ಅಭಿವೃದ್ಧಿ ಪರಿಷತ್ತು ಇವರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರುತ್ತಾರೆ ಮತ್ತು ಸಿಂಡಿಕೇಟಿನಿಂದ ನೇಮಕವಾಗಿರುತ್ತಾರೆ. ಇವರು, ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ವಿದ್ಯಾರ್ಹತೆಗಳನ್ನು ಪಡೆದಿರುತ್ತಾರೆ ಮತ್ತು ಪರಿನಿಯಮಗಳನ್ವಯ ಅಧಿಕಾರಗಳನ್ನು ಚಲಾಯಿಸುವರು ಮತ್ತು ಕರ್ತವ್ಯಗಳನ್ನು ನಿರ್ವಹಿಸಬಹುದು.

**ನಿರ್ದೇಶಕರು , ಶಾರೀರಿಕ ಶಿಕ್ಷಣ:**

ಶಾರೀರಿಕ ಶಿಕ್ಷಣ ನಿರ್ದೇಶಕರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರುವವರು ಮತ್ತು ಅಧಿನಿಯಮದ ೫೭ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ನೇಮಕಾತಿ ಮಂಡಲಿಯ ಶಿಫಾರಸಿನ ಮೇರೆಗೆ ಸಿಂಡಿಕೇಟಿನಿಂದ ನೇಮಕವಾಗಿರುತ್ತಾರೆ. ಅವನು ಪರಿನಿಯಮಗಳ ಮೂಲಕ ನಿಯಮಿಸಬಹುದಾದ ವಿದ್ಯಾರ್ಹತೆಗಳನ್ನು ಪಡೆದಿದ್ದು ಮತ್ತು ಪರಿನಿಯಮಗಳನ್ವಯ ಅಧಿಕಾರಗಳನ್ನು ಚಲಾಯಿಸುವರು ಮತ್ತು ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಅವರ ಉಪಲಬ್ಧಿಗಳು ಮತ್ತು ಸೇವಾ ಷರತ್ತುಗಳು ಪರಿನಿಯಮಗಳ ಮೂಲಕ ನಿಯಮಿಸಬಹುದು.

ಇತರ ಸಿಬ್ಬಂದಿಗಳು ನಿರ್ವಹಿಸುವ ಕರ್ತವ್ಯಗಳನ್ನು (೯)ರ ಅಡಿಯಲ್ಲಿ ಪುಟ ಸಂಖ್ಯೆ ೩೧ ರಲ್ಲಿ ನೀಡಲಾಗಿದೆ.